ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚೀ ತಾ। 1, ಸ್ರ್ 1884.

ಗಮನಿಸಿ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾರ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ವೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫೇಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರು ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್ಟ್‌ಗಳು ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಬೆಂಗಳೂರು ತಾಲ್ಲೂಕು ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಯಲಹಂಕದ ಕಸಬೆಯಲ್ಲಿರುವ ಹಳೇ ತಾಲ್ಲೂಕು ಕಚ್ಚೇರಿಯನ್ನು ಹರಾಜು ಮಾಡಬಹುದೆಂದು ದೀವಾನ್ ಸಾಹೆಬರವರ ಸಾಂಗರ್ಷ ಪ್ರೊಸೀಡಿಂಗ್ಸ್ ಅನುಸರಿಸಿ ಡಿಸ್ಟ್ರಿಕ್ಟ್ ಹುಜೂರಿಂದ ಮಾಹೇ ಗುಜಸ್ತಾ 21ನೇ ಮತ್ತು 932ನೇ ನಂಬರ್ ಹುಕ್ಕುಂ ಸಾದರಾಗಿರುವ ಪ್ರಕಾರ ಹರಾಜು ಆಗತಕ್ಕ ಕಚ್ಚೇರಿ ನಿವೇಶನದ ಚಕ್ಕ ಬಂದಿ ತಪಸೀಲ್.

1 ಪೂರ್ವಕ್ಕೆ ಮುನಕೆಟ್ಟ ಹರಾಜಿನೆಲ್ಲಿ ಪಡದ ಖಾಲೀ ಜ ಮಿನುಮತ್ತು ಸರಕಾರದ ಖಾಲೀ ಜಮಿನು ಸಹ.

1 ಪಶ್ಚಿಮಕ್ಕೆ ಕೋಟೇ ಪಳಕ್ಕೆ ಹೋಗುವದಾರಿ,

1 ಉತ್ತರಕ್ಕೆ ಹೊನ್ನಪ್ಪನ ಮನೆ.

1 ದಕ್ಷಿಣಕ್ಕೆ ಕೋಟೇವಳಕ್ಕೆ ಹೋಗುವ ದಾರಿ.

ಈ ಚತುರ್ಮಧ್ಯೆ ಇರುವ ಕಟ್ಟಿದ ಕಟ್ಟಡ ಅಂಕ್ಷಣ 65 ಮಧ್ಯೆ ತೊಟ್ಟ ಖಾಲೀ ಜಮಿನು ಅಂಕಣ 2 ಸಹ ಚಾಲತೀ ಇಸವೀ ಏಪ್ರೆಲ್ 7ನೇ ತಾರೀಖು ಸೋಮವಾರ ಹಗಲು 12 ಘಂಟೆ ಲಾಗಾಯತು 4 ಘಂಟೆ ವರವಿಗೂ ಸದರೀ ಕಟ್ಟಡದ ಬಳಿ ತಾಲ್ಲೂಕು ಆಫಿಸ ರವರಿಂದ ಹರಾಜು ಹಾಕಲ್ಪಡುತ್ತೆ. ಯಿಷ್ಟವುಳ್ಳ ಜನಗಳು ಸದರೀ ಟೈಮಿಗೆ ಸರಿಯಾಗಿ ಕಟ್ಟಡದ ಬಳಿ ಹಾಜರ್ ಯಿದ್ದು ಧಾರಾಳವಾಗಿ ಚಡ ಸವಾಲ್ ಮಾಡಬಹುದು. ಹರಾಜ್ ಖೈದಾದ ನಂತರ ಮತ್ತತಕ್ಕೆ ಸವಾಲ್‌ಗಳು ಅಂಗೀಕರಿಸುವದಿಲ್ಲ. ಹರಾಜಿನಲ್ಲಿ ಅಖೈರ್ ಸವಾಲ್ ನಿಂತ ದರಖಾಸ್ತುದಾರನು 4ರಲ್ಲಿ ಪೊಂದು ಹಿಸ್ಸೆ ಮೊಬಲಗು ತಕ್ಷಣ ಹಾಜರ್ ಮಾಡಿ ರೀತಿ ಪಡೆಯಬೇಕು. ಬಾಕೀ ಮೂರು ಹಿಸ್ಸೇ ಮೊಬಲಗಿಗೆ ಖಾತರ ಜಾಮೀನು ಕೊಡಬೇಕು. ಈ ಹರಾಜು ಮುಜರಿಯು ಡೆಪ್ಯೂಟಿ ಕಮ್ಮಿಷನ್ನರ್ ಸಾಹೆಬರವರು, ವ ದೀರ್ವಾ ಸಾಹೆಬರವರ ಮಂಜೂರಿಗೆ ವಳಪಟ್ಟದ್ದಾಗಿದೆ. ಮಂಜೂರಿ ಹುಕ್ಕುಂ ಬಂದ ಬಾಕೀ ಮೊಬಲಗಿಗೆ ತಗಾದೆ ಮಾಡಿದ ಪೊಡನೆಯೇ ಪೂರಾ ಮೊಬಲಗು ದರಖಾಸ್ತುದಾರನಾಗಲಿ ಜಾಮೀರ್ದಾರನಾಗಲಿ ಕೊಟ್ಟು ರೀದಿ ಪಡಿಯಬೇಕು. ಹಾಗೆ ಮೊಬಲಗು ಕೊಡದೆ ಯಿದ್ದರೆ ದುಸರಾ ಹರಾಜು ಆಗುವದರಲ್ಲಿ ಕಮ್ಮಿ ಬೀಳತಕ್ಕ ಮೊಬಲಗು ಅವ್ವಲ್ ದರಖಾಸ್ತುದಾರನು ಜಾಮೀನುದಾರನು ಸಹ ತೆರಬೇಕಾಗಿರುತ್ತೆ. ಈ ಮೊಬಲಗು ಇವರ ಚರ ಯಾ ಸ್ಥಿರಸ್ವತ್ತುಗಳ ಮೇಲೆ ವಿಲೇ ಮಾಡಲ್ಪಡುತ್ತೆ. ಶಿವಾಯಿ ಡಿಪಾಜಿಟ್ ಯಿಟ್ಟು ಯಿರುವ ಹಣವು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲಾಗೀತು.

ತಾರೀಖು 16ನೇ ಮಾರ್ಚೀ ಫಿಬ್ರವರೀ ಸ್ನ 1884.

ಡಿ. ಶಾಮರಾವ್,
ಅಮಲ್ದಾರ್.

ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶಿರಾ ತಾಲ್ಲೂಕು ಲಕ್ಕನಹಳ್ಳಿಲಿರುವ ಗುಜ್ಜಾರಪ್ಪನ ಮಗ ಕರೀತಿಮ್ಮನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ಕೇಸ್ ನಂಬರ್ 2.

ಹುಕ್ಕುಂ.

ಮೇಲ್ಕಂಡ ಕರೀತಿಮ್ಮನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ರೂಬರೂ ಅರ್ಜೀದಾರನಾದ ಕರೀತಿಮ್ಮನ ಪರವಾಗಿ ಅವನನ್ನು ಮತ್ತು ಸದರಿಯವನ ಲೇಣೇದಾರ್‌ರುದ ಸೋಮಲಿಂಗಂಣ 1, ಸಿದ್ದೇಗೌಡ 1, ಇವರ ತರಫ್ ಹಾಜರಾದ ಸಿದ್ದೇಗೌಡರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ತಿರಿಯಂಣನ ಮಗ ಸೋಮಲಿಂಗಂಣ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕರೀತಿಮ್ಮನು ಹೊಂದುವದಕ್ಕೆ ಹಕ್ಕುದಾರ ನಾಗುವದರ ಮೂಲಕ ದಿವಾಳೀ ಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿವೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕ್ರಂಡ ಯಾವ ಸಾಲಕ್ಕೂ ಲಿಸ್ಕ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.